SC:111/2021
PW:29 CW:41

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 111/2021

| | |
|---|---|
| PW | 29 |
| CW | 41 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 28.02.2025.

| | | |
|---|---|---|
| ಸಾಕ್ಷಿಯ ಹೆಸರು | : | ಕೆ.ಎ. ಕೃಷ್ಣಪ್ಪ |
| ತಂದೆಯ ಹೆಸರು | : | ಲೇಟ್ ಕೆ. ಆದಿಮೂರ್ತಿ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ಶಿಕ್ಷಕರು |
| ವಾಸಸ್ಥಳ | : | ಡಿ.ಪಾಳ್ಯ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಮೃತ ವಿಶ್ವನಾಥ್ ಇವರ ಪರಿಚಯ ಇತ್ತು. ಚಾಸಾ–1 ರವರು ಮೃತ ವಿಶ್ವನಾಥ್ ಇವರ ಹೆಂಡತಿಯಾಗಿದ್ದು, ಚಾಸಾ–2 ರವರ ಪರಿಚಯ ಇದ್ದು, ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ 1 ಮತ್ತು 3 ನೇ ಆರೋಪಿಯನ್ನು ಸಾಕ್ಷಿದಾರರು ನೋಡಿ ಅವರನ್ನು ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ನ್ಯಾಯಾಲಯದ ಮುಂದೆ ಹಾಜರಿರುವ 2

ಮತ್ತು 4ನೇ ಆರೋಪಿತರನ್ನು ನಾನು ಇದೇ ಮೊದಲಬಾರಿಗೆ ನೋಡುತ್ತಿರುವುದಾಗಿ ನುಡಿದಿರುತ್ತಾರೆ.

2. ಸಾಕ್ಷಿದಾರರು ನಿಪಿ–46 ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–46(ಬಿ) ಎಂದು ಗುರುತಿಸಲಾಯಿತು. ದಿಃ 15.07.2021 ರಂದು ಮಧ್ಯಾಹ್ನ 1.30ರ ನಂತರ ವೃತ್ತ ಕಚೇರಿಗೆ ಪೊಲೀಸರು ನನ್ನನ್ನು ಕರೆಸಿದ್ದು ಆ ಸಮಯದಲ್ಲಿ ಆಕಾಶ್ ಎಂಬ ಆರೋಪಿಯನ್ನು ತೋರಿಸಿರುತ್ತಾರೆ. ಸದರಿ ಆರೋಪಿಯ ನಿಕ್ಕರ್ ನಲ್ಲಿ ಒಪ್ಪೊ ಮೊಬೈಲ್ ಹಾಗೂ ಆರೋಪಿಯ ಶರ್ಟ್ ಅನ್ನು ಪೊಲೀಸರು ತೆಗೆದುಕೊಂಡು ಸೀಲು ಮಾಡಿರುತ್ತಾರೆ. ಅವುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ.

3. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸೀಲ್ ಆದ ಬಟ್ಟೆ ಕವರನ್ನು ತೆರೆದು ಅದರಲ್ಲಿರುವ ವಸ್ತುವನ್ನು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು ನೀಡಲಾಯಿತು. ಅದರಂತೆ ನ್ಯಾಯಾಲಯದ ಮುಂದೆ ಸೀಲಾದ ಕವರನ್ನು ತೆರೆದು ಅದರಲ್ಲಿದ್ದ ಒಂದು ಶರ್ಟ್ ಅನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು. ನಿಪಿ–46 ಕ್ಕೆ ಆರೋಪಿ, ವೃತ್ತ ನಿರೀಕ್ಷಕರು ಸಹಿ ಮಾಡಿರುತ್ತಾರೆ. ವಿಶ್ವನಾಥ್ ಇವರನ್ನು ಕೊಲೆ ಮಾಡಿದ ವಿಚಾರವಾಗಿ ನನ್ನನ್ನು ಠಾಣೆಗೆ ಕರೆಸಿದ್ದರು. ಸಾಕ್ಷಿದಾರರು ಮು.ಮಾ.4 ಮೊಬೈಲ್ ಅನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಸಿ.ಡಿ. ವಕೀಲರಿಂದಃ**

4. ನಿಪಿ–46 ಮಹಜರ್ ಗೆ ಬರುವಂತೆ ನನ್ನನ್ನು ವೃತ್ತ ನಿರೀಕ್ಷಕರು ಕರೆಸಿದ್ದರು. ನಾನು ಆ ದಿನ ವೃತ್ತ ನಿರೀಕ್ಷಕರ ಕಚೇರಿಗೆ ನನ್ನ ಮಗಳಿಗೆ ಸಂಬಂಧಿಸಿದ ಕೇಸಿನ ವಿಚಾರವಾಗಿ ಹೋದಾಗ ವೃತ್ತ ನಿರೀಕ್ಷಕರು ಈ ಕೇಸಿನ ವಿಚಾರ ತಿಳಿಸಿ ಪಂಚಸಾಕ್ಷಿದಾರರಾಗಿ ಸಹಕರಿಸಲು ಕೇಳಿದಾಗ ನಾನು ಒಪ್ಪಿರುತ್ತೇನೆ. ವೃತ್ತ ನಿರೀಕ್ಷಕರ ಕಚೇರಿ ಗೌರಿಬಿದನೂರಿನಲ್ಲಿ ಇರುವ ರೈಲ್ವೇ ಟ್ರಾಕ್ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ವೃತ್ತ ನಿರೀಕ್ಷಕರ ಕಚೇರಿಯ ಕೆಳ ಭಾಗದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ಗೌರಿಬಿದನೂರು ನಗರ ಪೊಲೀಸ್ ಠಾಣೆ ಬೇರೆ ಜಾಗದಲ್ಲಿ ಇರುತ್ತದೆ ಎಂದರೆ ಸರಿ.

5. ನಿಪಿ–46 ರಲ್ಲಿ ಏನು ವಿಚಾರ ಬರೆದಿರುತ್ತದೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ನಿಪಿ–46 ಕ್ಕೆ ನಾನು ಸಹಿ ಮಾಡುವ ಪೂರ್ವದಲ್ಲಿ ನಾನು ಈ ದಿನ ನೋಡಿದ ಮು.ಮಾ.4 ಹಾಗೂ ಮು.ಮಾ.9 ಎಲ್ಲಿ ಇತ್ತು ಎಂದು ನನಗೆ ತಿಳಿದಿಲ್ಲ ಎಂದರೆ ಸಾಕ್ಷಿಯ ಪೊಲೀಸರು ಅವು ಆಕಾಶ್ ಗೆ ಸಂಬಂಧಿಸಿರುವುದಾಗಿ ನನಗೆ ತೋರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಿಪಿ–46 ಅನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. 1 ನೇ ಆರೋಪಿಯನ್ನು ನಾನು ಇದೇ ದಿನ ಮೊದಲಬಾರಿಗೆ ನ್ಯಾಯಾಲಯದ ಮುಂದೆ ನೋಡಿದ್ದು ಇದಕ್ಕೂ ಪೂರ್ವದಲ್ಲಿ ನೋಡಿರುವುದಿಲ್ಲ ಎಂದರೆ ಸಾಕ್ಷಿಯು 1 ನೇ ಆರೋಪಿಯನ್ನು ನಾನು ಆ ದಿನ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನೋಡಿರುವುದಾಗಿ ಉತ್ತರಿಸಿರುತ್ತಾರೆ. ಮು.ಮಾ.4 ಮತ್ತು ಮು.ಮಾ.9 ಅನ್ನು ನಾನು ಇದೇ ದಿನ ಮೊದಲಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಆ ದಿನ ವೃತ್ತ ನಿರೀಕ್ಷಕರ

ಕಚೇರಿಯಲ್ಲಿ ನೋಡಿರುವುದಾಗಿ ಉತ್ತರಿಸಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ರಿಂದ 4 ನೇ ಆರೋಪಿ ಪರ:** ವಕೀಲರನ್ನು ಕೂಗಿಸಿದ್ದು, ಗೈರುಹಾಜರಿದ್ದು ಯಾರು ಪ್ರತಿನಿಧಿಸದೇ ಇರುವ ಕಾರಣ 2 ರಿಂದ 4 ನೇ ಆರೋಪಿತರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 28.02.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ.